ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಇಮೈಲ್: commissioner.pue@gmail.com ಫೋನ್: 080 23561944 ಪ್ಯಾಕ್ಸ್: 23361852

ಸಂಖ್ಯೆ: ಪಿಯುಇ/ಕಟ್ಟಡ-03/ಅನುಬಿ-01/ಲೆಶಿ-386/2016-17. ದಿನಾಂಕ: 17-02-2017.

## ಜ್ಞಾಪನ

**ವಿಷಯ:** ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟಡ, ತರಗತಿ ಕೊಠಡಿ, ಶೌಚಾಲಯ ಮತ್ತು ಇತ್ಯಾದಿಗಳನ್ನು ಒದಗಿಸಲು ಅನುದಾನವನ್ನು ಬಿಡುಗಡೆ ಮಾಡುವ ಕುರಿತು.

**ಉಲ್ಲೇಖ:** 1. ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯೋಸಕ 2016. ದಿನಾಂಕ: 24-12-2016.
2. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ರಸ್ತೆ, ಬೆಂಗಳೂರು ಇವರ ಪತ್ರ ಸಂಖ್ಯೆ: (1) ಮುಇಂ/ಪಂರಾಇಂಇ/ಕಾಇಂ-2/ತಾಂಸ-4/ಸಇಂ-2/ಪಪೂಕಾಕ/2016-17. ದಿನಾಂಕ: 13-01-2017.
3. ಈ ಕಛೇರಿಯ ಸಮಸಂಖ್ಯೆ ನಡವಳಿ ದಿನಾಂಕ: 23-01-2017.

* * *

**ಪ್ರಸ್ತಾವನೆ:**

ರಾಜ್ಯದ ಆಯ್ದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟಡವನ್ನು ಹಾಗೂ ತರಗತಿ ಕೊಠಡಿಗಳನ್ನು ಮತ್ತು ಶೌಚಾಲಯಗಳನ್ನು ನಿರ್ಮಿಸಲು ಉಲ್ಲೇಖ(1)ರಲ್ಲಿ ಸರ್ಕಾರವು ಅನುಮತಿಯನ್ನು ನೀಡಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಉಲ್ಲೇಖ(2)ರಲ್ಲಿ ಅನುಮೋದಿಸಿರುವ ಕಾಮಗಾರಿಗಳಿಗೆ ಮುಖ್ಯ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನೀಯರಿಂಗ್ ಇಲಾಖೆಯವರು ಅಂದಾಜು ಪಟ್ಟಿಯನ್ನು ಸಲ್ಲಿಸಿದ್ದು, ಆಡಳತಾತ್ಮಕ ಅನುಮೋದನೆಯನ್ನು ಹಾಗೂ ಸದರಿ ಕಾಮಗಾರಿಗಳಿಗೆ ಅನುದಾನವನ್ನು ಬಿಡುಗಡೆ ಮಾಡುವಂತೆ ಉಲ್ಲೇಖ(2)ರಲ್ಲಿ ಕೋರಿರುತ್ತಾರೆ. ಉಲ್ಲೇಖ(1)ರಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ಅನುಷ್ಠಾನಕ್ಕಾಗಿ ಸರ್ಕಾರವು ಆದೇಶದಲ್ಲಿ ಲೆಕ್ಕಶೀರ್ಷಿಕೆ 4202-01-202-1-05-386 (ಯೋಜನೆ)ರಡಿ ರೂ. 1202.00 ಲಕ್ಷರೂಪಾಯಿಗಳನ್ನು (ಒಂದು ಸಾವಿರದ ಎರಡು ನೂರಾ ಎರಡು ಲಕ್ಷರೂಪಾಯಿಗಳು ಮಾತ್ರ) ವೆಚ್ಚ ಮಾಡಲು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆಯವರಿಗೆ ಅನುಮತಿ ನೀಡಲಾಗಿದೆ.

ಉಲ್ಲೇಖ(3)ರ ಈ ಕಛೇರಿಯ ಆದೇಶದಲ್ಲಿ ಸಲ್ಲಿಕೆಯಾದ ಅಂದಾಜು ಪಟ್ಟಿಗಳಿಗೆ ಆಡಳತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಉಲ್ಲೇಖ (1)ರಲ್ಲಿ ಬಿಡುಗಡೆ ಮಾಡಿರುವ ಮೊತ್ತವು ಆರ್ಥಿಕ ವರ್ಷದ ಅಂತ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಸದರಿ ಮೊತ್ತವನ್ನು ಬಿಡುಗಡೆ ಮಾಡುವುದು ಸೂಕ್ತವೆಂದು ಪರಿಗಣಿಸಿ. ಉಲ್ಲೇಖ (1)ರಲ್ಲಿನ ವಿವರಗಳಂತೆ ಈ ರೀತಿಯಾಗಿ ನಿರ್ದೇಶಕರಿಗೆ ಅನುಮತಿಸಿರುವ ಮೊತ್ತದಲ್ಲಿ ಅನುಮೋದಿತ ಕಾಮಗಾರಿಗಳ ಅನುಷ್ಠಾನಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆ ಮಾಡಿ ಆದೇಶಿಸಿದೆ.

**ಆದೇಶ:**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಉಲ್ಲೇಖ(2)ರ ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯವರ ಕೋರಿಕೆಯಂತೆ ಉಲ್ಲೇಖ(1)ರಲ್ಲಿ ಅನುಮೋದನೆಗೊಂಡ ಕಾಮಗಾರಿಗಳ ಅನುಷ್ಠಾನಕ್ಕಾಗಿ ಲೆಕ್ಕಶೀರ್ಷಿಕೆ 4202-01-202-1-05-386 (ಯೋಜನೆ)ರಡಿ ರೂ. 1202.00 ಲಕ್ಷರೂಪಾಯಿಗಳಲ್ಲಿ (ಒಂದು ಸಾವಿರದ ಎರಡು ನೂರಾ ಎರಡು ಲಕ್ಷರೂಪಾಯಿಗಳು ಮಾತ್ರ) ಒಟ್ಟು

495.40ಗಳನ್ನು (ನಾಲ್ಕು ನೂರಾ ತೊಂಭತ್ತೈದು ಲಕ್ಷದ ನಲವತ್ತು ಸಾವಿರ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಿ ಆದೇಶಿಸಿದೆ. ಸದರಿ ಮೊತ್ತವನ್ನು ಈ ಕೆಳಗಿನಂತೆ ಜಿಲ್ಲಾಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳಿಗೆ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಮೊತ್ತವನ್ನು ಅಪ್‌ಲೋಡ್ ಮಾಡಲು ಲೆಕ್ಕಪತ್ರಾಧಿಕಾರಿಗಳಿಗೆ ಸೂಚಿಸಿದೆ.

| ಕ್ರಸ | ಜಿಲ್ಲಾ ಉಪನಿರ್ದೇಶಕರುಗಳು | ಬಿಡುಗಡೆ ಮಾಡಿರುವ ಮೊತ್ತ (ರೂಲಕ್ಷಗಳಲ್ಲಿ) |
|---|---|---|
| 1. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಂಡ್ಯ, ಮಂಡ್ಯ | 196.15 |
| 2. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ | 17.90 |
| 3. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾವೇರಿ ಜಿಲ್ಲೆ, ಹಾವೇರಿ | 131.00 |
| 4. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಹಾಸನ ಜಿಲ್ಲೆ, ಹಾಸನ | 65.30 |
| 5. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಉಡುಪಿ ಜಿಲ್ಲೆ, ಉಡುಪಿ | 52.40 |
| 6. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು | 32.65 |
| 7. | ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು. | 81.55 |

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಸಂಬಂದಿಸಿದ ಜಿಲ್ಲೆಗಳ ಉಪನಿರ್ದೇಶಕರುಗಳು, ಸ್ವೀಕೃತನ ರಶೀದಿಯ ಮೂಲಕ ಖಜಾನೆಯಿಂದ ಸೆಳೆದು ಸಂಬಂದಿಸಿದ ಜಿಲ್ಲೆಗಳ ಕಾರ್ಯಪಾಲಕ ಅಭಿಯಂತರರುಗಳು, ಜಿಲ್ಲಾ ಪಂಚಾಯತ್_ರಾಜ್ ಇಂಜಿನೀಯರಿಂಗ್ ವಿಭಾಗ ಇವರುಗಳಿಗೆ ಪಾವತಿಸುವುದು. ಈ ರೀತಿಯಾಗಿ ಪಾವತಿಸಿರುವ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಇವರು ಲೆಕ್ಕಶೀರ್ಷಿಕೆ 8443-00-108-0-00 ಸಾರ್ವಜನಿಕ ಕಾಮಗಾರಿಗಳ ಠೇವಣಿ ಖಾತೆಗೆ ಜಮಾ ಮಾಡಿಕೊಂಡು ನಿಯಮಾನುಸಾರ ಕ್ರಮವಹಿಸುವುದು.

ಈ ರೀತಿಯಾಗಿ ಬಿಡುಗಡೆ ಮಾಡಿರುವ ಮೊತ್ತವನ್ನು ಈ ಕೆಳಕಂಡ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡ ಕಾಮಗಾರಿಗಳಿಗೆ ಮಾತ್ರ ಉಪಯೋಗಿಸತಕ್ಕದ್ದು. ಅಲ್ಲದೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯದೆ ಯಾವುದೇ ಕಾಮಗಾರಿಗಳನ್ನು ಪ್ರಾರಂಭಿಸತಕ್ಕದ್ದಲ್ಲ. ಈ ನಿರ್ದೇಶನಾಲಯದಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ಪ್ರಕರಣದಲ್ಲಿ ಕೂಡಲೆ ಕಾಮಗಾರಿಗಳನ್ನು ಪ್ರಾರಂಭಿಸಲು ಸೂಚಿಸಿದೆ.

| ಕ್ರಸ | ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿವರ | ಕಾಮಗಾರಿ | ಪರಿಷ್ಕೃತ ಅನುಮೋದಿತ ದಠ |
|---|---|---|---|
| 1. | ಕೆ ಆರ್ ಪೇಟೆ, ಮಂಡ್ಯ ಜಿಲ್ಲೆ | ಕಟ್ಟಡ ನಿರ್ಮಾಣ | 114.60 |
| 2. | ನಿಟ್ಟೂರು, ಹೊಸನಗರ ತಾ, ಶಿವಮೊಗ್ಗ ಜಿಲ್ಲೆ | ಶೌಚಾಲಯ ನಿರ್ಮಾಣ | 17.90 |
| 3. | ಬಿಸಲೆ ಹಳ್ಳಿ, ಬ್ಯಾಡಗಿ ತಾ, ಹಾವೇರಿ ಜಿಲ್ಲೆ | ಕಟ್ಟಡ ನಿರ್ಮಾಣ | 65.50 |
| 4. | ಚಿನ್ನೇನಹಳ್ಳಿಗಡಿ, ಅರಸೀಕೆರೆ ತಾ, ಹಾಸನ ಜಿಲ್ಲೆ | 02 ಕೊಠಡಿಗಳು | 32.65 |
| 5. | ಕುರವಂಕ, ಅರಸೀಕೆರೆ ತಾ, ಹಾಸನ ಜಿಲ್ಲೆ | 02 ಕೊಠಡಿಗಳು | 32.65 |
| 6. | ಜಕ್ಕೂರು, ಬೆಂಗಳೂರು ಉತ್ತರ ಜಿಲ್ಲೆ | 04 ಕೊಠಡಿಗಳು | 81.55 |

| | | | |
|---|---|---|---|
| 7. | ಕುಂದಾಪುರ, ಉಡುಪಿ ಜಿಲ್ಲೆ | ಕಟ್ಟಡ ನಿರ್ಮಾಣ | 52.40 |
| 8. | ಬೆಟ್ಟದಪುರ, ಪಿರಿಯಾಪಟ್ಟಣ ತಾ, ಮೈಸೂರ ಜಿಲ್ಲೆ | 02 ಕೊಠಡಿಗಳು | 32.65 |
| 9. | ಅರ್ಜುಣಗಿ, ಹಾವೇರಿ ಜಿಲ್ಲೆ | ಕಟ್ಟಡ/ಕೊಠಡಿ ನಿರ್ಮಾಣ | 65.50 |

**ಷರತ್ತುಗಳು**

1. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತವನ್ನು ಉಲ್ಲೇಖ(3)ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುವ ಕಾಮಗಾರಿಗೆ ಉಪಯೋಗಿಸುವುದು.
2. ಸದರಿ ಮೊತ್ತವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆದ ಕಾಮಗಾರಿಗಳಿಗೆ ಮಾತ್ರ ಉಪಯೋಗಿಸತಕ್ಕದ್ದು.
3. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತದ ಕುರಿತಂತೆ ಭವಿಷ್ಯದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ತೆಗೆದುಕೊಳ್ಳುವ ಎಲ್ಲಾ ನಿರ್ಧರಗಳಿಗೂ ಬದ್ದರಾಗಿರತ್ತಕ್ಕದ್ದು.
4. ಹಾಲಿ ಬಿಡುಗಡೆ ಮಾಡುತ್ತಿರುವ ಮೊತ್ತದ ಕುರಿತಂತೆ/ಕಾಮಗಾರಿಗಳ ಅನುಷ್ಠಾನದ ಸಂಬಂದ ಜಿಲ್ಲಾ ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಡುವೆ ಏನೆ ವಿವಾದ/ಬಿನ್ನಾಭಿಪ್ರಾಯಗಳು ಉಂಟಾದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ತೆಗದುಕೊಳ್ಳುವ ತೀರ್ಮಾನಕ್ಕೆ ಬದ್ದರಾಗಿರತಕ್ಕದ್ದು.
5. ಹಾಲಿ ಬಿಡುಗಡೆ ಮಾಡಿರುವ ಮೊತ್ತಕ್ಕೆ ಮೊದಲು ಪೂರ್ಣ ಪ್ರಮಾಣದ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
6. ಬಿಡುಗಡೆ ಮಾಡುತ್ತಿರುವ ಮೊತ್ತಕ್ಕೆ ಸೂಕ್ತ ಲೆಕ್ಕಪತ್ರಗಳನ್ನು ಇರಿಸತಕ್ಕದ್ದು.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

**ಪ್ರತಿಗಳು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸಂಬಂಧಿಸಿದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
4. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ರಸ್ತೆ, ಬೆಂಗಳೂರು.
5. ಉಪನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ ರಸ್ತೆ, ಬೆಂಗಳೂರು.
6. ಸಂಬಂಧಿಸಿದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ.
7. ಸಂಬಂದಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆಯವರುಗಳಿಗೆ.
8. ಸಂಬಂದಿಸಿದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ.
9. ಖಜನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
11. ಹೆಚ್ಚುವರಿ/ಕಛೇರಿ ಪ್ರತಿ.